C.R.P.67 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

Form No.4
(Civil)
Depositions
sheets
R.P.No.57

ಎಸ್.ಸಿ. ಸಂಖ್ಯೆ 78/2019

ಪ್ರಾ ಸಾ 2 ಚಾ ಸಾ 3

| | |
|---|---|
| ಸಾಕ್ಷಿಯ ಹೆಸರು | ಲಕ್ಷ್ಮಮ್ಮ |
| ಗಂಡನ ಹೆಸರು | ರಾಚೇಗೌಡ |
| ವಯಸ್ಸು | 58 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಕೆಂಚನದೊಡ್ಡಿ ಗ್ರಾಮ |

ಸಾಕ್ಷಿದಾರರಿಗೆ ದಿನಾಂಕ 30.11.2019 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ 2 ರಾಚೇಗೌಡ ನನ್ನ ಗಂಡ. ಪ್ರಾ ಸಾ 1 ನನ್ನ ಮಗಳು. 1 ನೇ ಆರೋಪಿ ಆಕೆಯ ಗಂಡ, 2 ನೇ ಆರೋಪಿ 1 ನೇ ಆರೋಪಿಯ ತಾಯಿ. ಚಾಸಾ 12 ನನ್ನ ತಂಗಿ, ಚಾಸಾ 11 ಆಕೆಯ ಗಂಡ. ಚಾಸಾ 21 ನನ್ನ ಮಗಳ ನಾದಿನಿ ಮತ್ತು ಚಾಸಾ 20 ಆಕೆಯ ಗಂಡ. ನನಗೆ 3 ಜನ ಮಕ್ಕಳು, ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ.

2. ನನ್ನ ಮಗಳಪ್ರಾ ಸಾ 1 ರವರನ್ನು ಮದುವೆ ಮಾಡಿ 10 ವರ್ಷ ಆಗಿರುತ್ತದೆ. ನನ್ನ ಮಗಳ ಮದುವೆಯ ಮಾತುಕತೆಯು, ಮದುವೆಯ ಒಂದು ತಿಂಗಳ ಮುಂಚೆ ಚಾಸಾ 11 ಮತ್ತು 12 ರವರ ಮನೆಯಲ್ಲಿ ನಡೆದಿತ್ತು. ಚಾಸಾ 11 ಮತ್ತು 12 ರವರು ನನ್ನ ತಂಗಿ ಮತ್ತು ತಂಗಿಯ ಗಂಡ ಆಗಿರುತ್ತಾರೆ. ಮದುವೆಯ ಮಾತುಕತೆಗೆ 1 ನೇ ಆರೋಪಿ ಕಡೆಯಿಂದ ಪ್ರಾ ಸಾ 1 ರವರ ಅತ್ತೆ ಮಾವ, ಆಕೆಯ ನಾದಿನಿ ರೇಖಾ ಮತ್ತು ಆಕೆಯ ಗಂಡ ಶಿವಲಿಂಗೇಗೌಡ ಬಂದಿದ್ದರು. ನಮ್ಮ ಕಡೆಯಿಂದ ನಾನು, ನನ್ನ ಗಂಡ, ನನ್ನ ತಂಗಿ ಮತ್ತು ತಂಗಿಯ ಗಂಡ ಮತ್ತು ರಾಚಯ್ಯ ಎಂಬುವವರು ಸೇರಿದ್ದರು. ಮದುವೆಯ ಮಾತುಕತೆಯಲ್ಲಿ ಹುಡುಗನ ಕಡೆಯವರು 150 ಗ್ರಾಂ ಚಿನ್ನ, 1 ಲಕ್ಷ ರೂಪಾಯಿ

ನಗದು, ಒಂದು ಸ್ಕೂಟರ್ ತೆಗೆದುಕೊಳ್ಳಲು 50 ಸಾವಿರ ರೂಪಾಯಿ ಮತ್ತು ಛತ್ರದಲ್ಲಿ ಮದುವೆ ಮಾಡಿಕೊಡಬೇಕೆಂದು ಕೇಳಿದ್ದರು. ಮದುವೆ ಮಾತುಕತೆ ಆಡಿದಂತೆ ನಾವುಗಳು ಆರೋಪಿಗೆ ಕೊಟ್ಟಿರುತ್ತೇವೆ. ಬಂಗಾರದ ಪೈಕಿ 1 ನೇ ಆರೋಪಿಗೆ 25 ಗ್ರಾಂ ಚಿನ್ನದ ಚೈನು, 10 ಗ್ರಾಂ ತೂಕದ ಉಂಗುರ ಕೊಟ್ಟಿದ್ದೆವು. ನನ್ನ ಮಗಳು ಪ್ರಾ ಸಾ 1 ರವರಿಗೆ 55 ಗ್ರಾಂ ತೂಕದ ಮಾಂಗಲ್ಯ ಸರ, 25 ಗ್ರಾಂ ತೂಕದ ನೆಕ್ಲೇಸು, 2 ಬಳೆ, 15 ಗ್ರಾಂ ತೂಕದ ಓಲೆ ಜುಮುಕಿ ಕೊಟ್ಟಿದ್ದರು.

3. ಕೆ ಎಂ ದೊಡ್ಡಿ ಯ ಬಾಲಾಜಿ ಸಮುದಾಯ ಭವನದಲ್ಲಿ ನನ್ನ ಮಗಳು ಪ್ರಾ ಸಾ 1 ರವರ ಮದುವೆಯನ್ನು 1 ನೇ ಆರೋಪಿಯ ಜೊತೆ ಮಾಡಿರುತ್ತೇವೆ. ಮದುವೆಯಾದ ಮೇಲೆ ನಾನು ನೆಲಮಾಕನಹಳ್ಳಿಯಲ್ಲಿರುವ ಆರೋಪಿ ಮನೆಯಲ್ಲಿ ನನ್ನ ಮಗಳು ಪ್ರಾ ಸಾ 1 ರವರು ವಾಸ ಮಾಡಿಕೊಂಡಿದ್ದಳು. ಆರೋಪಿಗಳ ಮನೆಯಲ್ಲಿ ನನ್ನ ಮಗಳು ಪ್ರಾ ಸಾ 1 ಆಕೆಯ ಅತ್ತೆ ಮಾವ ಮತ್ತು ಆಕೆಯ ಗಂಡ 1 ನೇ ಆರೋಪಿ ವಾಸ ಮಾಡಿಕೊಂಡಿದ್ದರು. 1 ನೇ ಆರೋಪಿಗೆ ಒಬ್ಬರು ಅಕ್ಕ ರೇಖಾ ಮತ್ತು ತಮ್ಮ ರಮೇಶ ಇರುತ್ತಾರೆ. ಪ್ರಾ ಸಾ 1 ರವರ ಮದುವೆಗೆ ಮೊದಲೇ 1 ನೇ ಆರೋಪಿಯ ಅಕ್ಕನನ್ನು ಸಿದ್ದೇಗೌಡನದೊಡ್ಡಿಗೆ 10 ವರ್ಷದ ಹಿಂದೆ ಮದುವೆ ಮಾಡಿಕೊಟ್ಟಿದ್ದರು. ಸದರಿ ಗ್ರಾಮವು ಆರೋಪಿಗಳ ಊರಿನಿಂದ 40 ರಿಂದ 50 ಕಿಲೋ ಮೀಟರ್ ಆಗುತ್ತದೆ. 1 ನೇ ಆರೋಪಿಯ ತಮ್ಮ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಇರುತ್ತಾನೆ. ಮದುವೆಯಾದ 2 ವರ್ಷ ಪ್ರಾ ಸಾ 1 ರವರ ಸಂಸಾರ ಚೆನ್ನಾಗಿತ್ತು. ಅವರಿಗೆ ಒಬ್ಬ ಮಗ ಇರುತ್ತಾನೆ. ಮದುವೆಯಾದ ಒಂದು ವರ್ಷಕ್ಕೆ ಒಂದು ಗಂಡು ಮಗು ಆಗಿರುತ್ತದೆ. ಪ್ರಾ ಸಾ 1 ರವರ ಹೆರಿಗೆಯು ನಮ್ಮ ಮನೆಯಲ್ಲಿ ಆಗಿರುತ್ತದೆ. ಹೆರಿಗೆಯಾದ 9 ತಿಂಗಳ ನಂತರ ಪ್ರಾ ಸಾ 1 ರವರು ವಾಪಸ್ಸು ಆರೋಪಿಗಳ ಮನೆಗೆ ಹೋದಳು. ಆರೋಪಿಗಳ ಮನೆಗೆ ಹೋದ ಮೇಲೆ ಆರೋಪಿಗಳು ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಮತ್ತು ನೀವು ಕೊಟ್ಟಿದ್ದ ಒಡವೆಗಳನ್ನು ತೂಕ ಮಾಡಿಸಿದಿವಿ ಅದು ಹೆಚ್ಚು ಕಮ್ಮಿ ಇರುತ್ತದೆ ಎಂದು ಬೈದು, ಕಿರುಕುಳ ಕೊಟ್ಟು ಪ್ರಾ ಸಾ 1 ರವರನ್ನು ನಮ್ಮ ಮನೆಗೆ ಕಳುಹಿಸುತ್ತಿದ್ದರು. ಈ ಬಗ್ಗೆ ನಮ್ಮ ಮನೆಯಲ್ಲಿ ಒಂದು ಬಾರಿ ಮತ್ತು ನರಸಿಂಹ ದೇವಸ್ಥಾನದ ಬಳಿ ಎರಡು ಮೂರು ಪಂಚಾಯಿತಿ ಆಗಿರುತ್ತದೆ.

4. ದಿನಾಂಕ 17.11.2016 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ 1 ನೇ ಆರೋಪಿ ನಮ್ಮ ಮನೆಗೆ ಬಂದು ಪ್ರಾ ಸಾ 1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ನಮ್ಮ ಮನೆಗೆ ಕಳುಹಿಸಿಕೊಡಿ ಎಂದು ನಮ್ಮನ್ನು ಕೇಳಿದ್ದನು. ಆಗ ನಾವು ನಿನ್ನ ತಂದೆ ತಾಯಿಗೆ ತಿಳಿಸು ನಾವು ಮನೆಗೆ ಕರೆದುಕೊಂಡು ಬರುತ್ತೇವೆ ಎಂದು ತಿಳಿಸಿದೆವು. ಮಾರನೇ ದಿವಸ 18.11.2016 ರಂದು ಮಧ್ಯಾಹ್ನ 12.00 ಗಂಟೆಗೆ ನಾನು, ನನ್ನ ಗಂಡ ಪ್ರಾ ಸಾ 1 ರವರು ಮತ್ತು ಪ್ರಾ ಸಾ 1 ರವರ ಮಗನೊಂದಿಗೆ ಆರೋಪಿಗಳ ಮನೆಗೆ ಹೋದೆವು. ನಾವು ಆರೋಪಿ ಮನೆಗೆ ಹೋದಾಗ ಮನೆಯಲ್ಲಿ 2 ನೇ ಆರೋಪಿ, ಚಾಸಾ 20 ಮತ್ತು ಚಾಸಾ 21 ಇದ್ದರು. ನಾವು ಪ್ರಾ ಸಾ 1 ಮತ್ತು ಆಕೆಯ ಮಗನನ್ನು ಮನೆಯ ಒಳಗೆ ಕಳುಹಿಸಿ ನಾವು ಹೊರಗಡೆ ನಿಂತಿದ್ದೆವು. 2 ನೇ ಆರೋಪಿ ಗಲಾಟೆ ಪ್ರಾರಂಭ ಮಾಡಿ ಆಕೆಯ ಮಗ 1 ನೇ

ಆರೋಪಿಗೆ ಪೋನ್ ಮಾಡಿ ಕರೆಸಿಕೊಂಡಳು. ನನ್ನ ಅಳಿಯ 1 ನೇ ಆರೋಪಿ ನೀನು ಮನೆಯಿಂದ ಹೊರಗೆ ಹೋಗು ಎಂದು ಹೇಳಿ ಪ್ರಾ ಸಾ 1 ರವರ ಮೇಲೆ ಗಲಾಟೆ ಮಾಡಿ ಆಕೆಗೆ ಹೊಡೆದ. ನಾವುಗಳು ಪುನಃ ಪ್ರಾ ಸಾ 1 ರವರನ್ನು ಮನೆಯ ಒಳಗಡೆ ಕರೆದುಕೊಂಡು ಹೋಗಿ ಏಕೆ ಅವಳನ್ನು ಮನೆಯ ಹೊರಗೆ ಕಳುಹಿಸುತ್ತಿದ್ದೀಯಾ ಎಂದು ಕೇಳಿದಾಗ, ಪ್ರಾ ಸಾ 1 ರವರ ಅತ್ತೆ ಮತ್ತು ಗಂಡ ಅಂದರೆ 1 ಮತ್ತು 2 ನೇ ಆರೋಪಿಗಳು ಆಕೆಯ ಮೇಲೆ ಸೀಮೆಎಣ್ಣೆ ಎರಚಿದರು. ಪ್ರಾ ಸಾ 1 ರವರ ಬಳೆಗಳು ಹೊಡೆದು ಹೋಗಿದ್ದವು. ಪ್ರಾ ಸಾ 1 ರವರಿಗೆ ಪ್ರಜ್ಞೆ ಇರಲಿಲ್ಲ, ನಾವು ಆಕೆಗೆ ನೀರು ಎರಚಿ ಸುಧಾರಿಸಿ ಆಸ್ಪತ್ರೆಗೆ ಬೈಕ್ ನಲ್ಲಿ ಕರೆದುಕೊಂಡು ಹೋದೆವು. ಆರೋಪಿಗಳು ಮನೆಯ ಹಿಂದಿನ ಬಾಗಿಲಿನಿಂದ ಓಡಿ ಹೋದರು. ಈ ಬಗ್ಗೆ ಪೊಲೀಸರು ವಿಚಾರಿಸಿದ್ದಾರೆ, ನಾನು ಆ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ಮುದ್ದೆಮಾಲು 1 ರಿಂದ 4 ನನ್ನ ಮಗಳು ಪ್ರಾ ಸಾ 1 ಆ ದಿವಸ ತೊಟ್ಟ ಬಟ್ಟೆಗಳಾಗಿರುತ್ತವೆ. ಸೀಮೆಎಣ್ಣೆ ಕ್ಯಾನನ್ನು ತೋರಿಸಿದರೆ ಗುರುತಿಸಬಲ್ಲೆ. ಮುದ್ದೆಮಾಲು 5 ಸದರಿ ಸೀಮೆಎಣ್ಣೆ ಕ್ಯಾನು ಆಗಿರುತ್ತದೆ. 1 ನೇ ಆರೋಪಿಯ ತಂದೆ ತೀರಿಕೊಂಡು ಇಲ್ಲಿಗೆ 4 – 5 ವರ್ಷ ಆಗಿರುತ್ತದೆ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಎಂ ವಿ ಆರ್ ವಕೀಲರಿಂದಃ

5. ಆರೋಪಿಗಳ ಪರ ವಕೀಲರು ಚಾಸಾ 3 ರವರ ಮುಖ್ಯ ವಿಚಾರಣೆಯಾದ ಮೇಲೆ ಈ ಸಾಕ್ಷಿಯ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿ ಅರ್ಜಿ ಸಲ್ಲಿಸಿದ್ದರಿಂದ ಅರ್ಜಿಯನ್ನು ಪುರಸ್ಕರಿಸಿ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇ,

(ರವೀಂದ್ರ.ಆರ್.)
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.